

ಕಣ್ಣುಗಳನ್ನು ಅನಾವರಣಗೊಳಿಸುತ್ತಿದೆ...

‘ಏನಾಯ್ತು ಜಯಶ್ರೀ ಕೂತ್ಕೋ’ ಪಿಸುಗಿದೆ. ‘ಇಲ್ಲ ಉಷಾಕ್ಕ’ ಎಂದು ದುಬ್ಬಿಯಿಂದ ತಲೆತಗ್ಗಿಸಿದಳು. ಕಣ್ಣುಗಳು ನೀರಾಡುತ್ತಾ, ಹನಿ ಕದಪಿಗಿಳಿಯುತ್ತಿತ್ತು. ಬಲವಂತವಾಗಿ ಎಳೆದು ಕೂರಿಸಿ ಅವಳ ಬೆನ್ನು ಬಳಸಿ ‘ಏನಾಯ್ತು ಪುಟ್ಟಿ’ ಎಂದು ಕೇಳಿದೆ. ಅಂಚಿನ ಸೀಟಿನಲ್ಲಿದ್ದ ಮಾಮಿಯು ಸ್ಥಳ ಪಲ್ಲಟಗೊಂಡು ಅವಳ ಪಕ್ಕದ ಸೀಟಿಗೆ ಬಂದು ‘ಏನಾಯ್ತೇ ಜಯಶ್ರೀ’ ಎಂದು ಅನುನಯಿಸತೊಡಗಿದರು.

ತುಸು ಬಿಕ್ಕುತ್ತಾ ಜಯಶ್ರೀ ‘ಅದು ಮಾಮೀ... ನನ್ನ ಕಿವೀದು ಬಿದ್ದುಹೋಗಿದೆ’ ಅಂದಳು. ‘ಅಯ್ಯೋ ರಾಮ, ಯಾವಾಗ?’ ಎಂದು ಕೇಳಿದಾಗ ‘ಈಗ’ ಎಂದು ಕಣ್ಣೊರೆಸಿಕೊಂಡಳು. ನಾನು ‘ಮನೆಯಿಂದ ಹೊರಡೋವಾಗ ಇತ್ತೇನೆ? ಸರಿಯಾಗಿ ನೋಡ್ಕೊಂಡ್ಯ?’ ಎಂದು ಕೇಳಿದೆ. ‘ಇತ್ತು ಉಷಾಕ್ಕ, ಎರಡೂ ಕಿವೀಗೆ ಹಾಕ್ಕೊಂಡೇ ಬಂದೆ’ ಅಂದಳು. ‘ಹೋಕ್ಕೊಳ್ಳಿ ಇನ್ನೊಂದು ಕಿವೀಲಿ ಇದೆಯಲ್ಲಾ ಅದನ್ನ ತೋರಿಸು. ಹುಡುಕೋಣವಂತೆ’ ಅಂದರು ಮಾಮಿ. ‘ಇಲ್ಲ ಮಾಮೀ ಎರಡೂ ಕಿವೀದು ಬಿದ್ಹೋಗಿದೆ’ ಅಂದಳು ಅಳುಬುರುಕು ದನಿಯಿಂದ.

ಮಾಮಿ ಆತಂಕಗೊಂಡು ಅಲ್ಲೇ ಸೀಟಿನ ಕೆಳಭಾಗದಲ್ಲಿ ಕುಳಿತುಕೊಂಡು ಕೈಯಿಂದ ಸೀಟಿನಡಿಯನ್ನು, ಕಾಲಿಡುವ ನೆಲವನ್ನು ತಡಕ ಹತ್ತಿದ್ದರು. ಮುಂದಿನ ಸೀಟಿನಡಿಯನ್ನು ಬಿಡದೇ ಹುಡುಕಿದರು. ನಾನೂ ಕುಳಿತು ನನ್ನ ಸೀಟಿನ ಹಿಂದು ಮುಂದಿನ ಜಾಗವನ್ನು ಸಾರಿಸುವಂತೆ ತಡಕಿದೆ. ಅವಳು ಕುಳಿತ ಸೀಟಿನ ಮೇಲೂ ಕೆಳಗೂ ಹುಡುಕಿದೆ ಎಲ್ಲೂ ಏನೂ ಸಿಕ್ಕಲಿಲ್ಲ. ಅಷ್ಟರಲ್ಲಿ ಗೇಟ್ ಕೀಪರ್ ಹತ್ತಿರ ಬಂದು ‘ಏನ್ ಮೇಡಂನೋರೆ, ಏನ್ ಬೀಳಿಸ್ಕೊಂಡ್ರಿ’ ಅಂದಾಗ ‘ಕಿವೀದು ಬಿದ್ಹೋಗಿದೆ, ಈ ಹುಡುಗೀದು’ ಅಂದೆ. ಅವನು ‘ತಡೀರಿ ಟಾರ್ಚ್ ಬುಡ್ತೀನಿ’ ಅಂತ ಸೀಟಿನ ಮೇಲೆ ಕೆಳಗೆ ಅಕ್ಕಪಕ್ಕ ಹಿಂದೆ ಮುಂದೆ ಟಾರ್ಚ್ ಬಿಡಹತ್ತಿದ. ನಾವು ಹುಡುಕುವ ಕಾಯಕ ಮುಂದುವರೆಸಿದೆವು.

ಅವನು ‘ನೀವೇನು ಯೋಚನೆ ಮಾಡ್ಬೇಡಿ, ಕಸ ಗುಡಿಸೋರಿಗೆ ಹೇಳ್ತೀನಿ. ಎಲ್ಲಿದ್ರೂ ಸಿಕ್ಕೇ ಸಿಗುತ್ತೆ. ಮೆಟ್ಲುಗಳಲ್ಲವ್ರ... ಎಲ್ಲೋ ಉರುಳಿಕೊಂಡು ಹೋಗಿರ್ತದೆ’ ಅಂದ.

ಟಾರ್ಚ್ ಬಿಡುವುದು ನಾವೆಲ್ಲ ಏಳುವುದು ಕೂರುವುದು ನಮ್ಮ ಹಿಂದಿನವರಿಗೆ, ಮುಂದಿನವರಿಗೆ ಕಿರಿಕಿರಿಯಾಯಿತು. ‘ಅಯ್ಯೋ ಏನ್ರಮ್ಮ ನಿಮ್ದು. ಸಿನಿಮಾ ಮುಗಿದ ಮೇಲೆ ಬೆಳಕಲ್ಲಿ ಹುಡ್ಕೊಳಿ. ಕತ್ಲೇಲಿ ಹುಡುಕಿದ್ರೆ ಸಿಗುತ್ತಾ? ನಾವೆಲ್ಲ ಅಷ್ಟೊತ್ತು ಕ್ಯೂ ನಿಂತು ಕಷ್ಟಪಟ್ಟು ಟಿಕೇಟ್ ತಗೊಂಡು ಬಂದಿದ್ದೀವಿ. ಒಳ್ಳೇ ರಾಮಾಯಣ ಆಯ್ತು ನಿಮ್ದು. ನೆಮ್ಮದಿಯಾಗಿ ಸಿನಿಮಾ ನೋಡೋಕು ಬಿಡಲ್ಲ. ತತ್ ಎಲ್ಲಿಂದ ಬರ್ತಾರೋ’ ಅಂತ ಸಿಡುಕಿದ್ದು ಆಯ್ತು!

ನಾನೇನು ಕಮ್ಮಿ ಇರಲಿಲ್ಲ. ‘ಅಲ್ರಿ ಇದೊಳ್ಳೇ ಚೆನ್ನಾಗಿ ಹೇಳ್ತಿರಲ್ಲ. ಆ ಹುಡುಗಿ ಕಿವೀದು ಕಳಕೊಂಡಿದೆ. ಬೆಲೆ ಬಾಳೋ ವಸ್ತು ಯಾರ್ ಕೈಗಾದ್ರೂ ಸಿಗೋ ಮೊದಲು ನಾವು ಹುಡುಕಬೇಕಲ್ವ’ ಅಂದೆ. ಈ ವಾಗ್ವಾದ, ಕಿರಿಕಿರಿ,